# ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ.

## ಸಿ.ಸಿ ನಂ: 382/2022

ಫಿ.ಸಾ.-1
ಚಾ.ಸಾ.-3

ಹೆಸರು : ರಾಯಪ್ಪ ಅಡಿವೆಪ್ಪಾ ಮಣ್ಣಕೇರಿ

ವಯಸ್ಸು : **28** ವರ್ಷ

ಉದ್ಯೋಗ : ಅಬಕಾರಿ ರಕ್ಷಕ, ಬೆಳಗಾವಿ

ವಾಸ : ಬೆಳಗಾವಿ.

ದಿನಾಂಕ 11-07-2023 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸಸಅ ರವರಿಂದ</u>

2019 ರಿಂದ ಜೂನ್ 2023 ರ ವರೆಗೆ ನಾನು ಕಣಕುಂಬಿ ತನಿಖಾ ಠಾಣೆಯಲ್ಲಿ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಸಾಕ್ಷಿದಾರರಿಗೆ ಈಗ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಮಹಜರನ್ನು ನಿ.ಪಿ.1 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.1-ಎ ಎಂದು ಗುರುತಿಸಲಾಯಿತು. ದಿನಾಂಕ 26.02.2021 ನಾನು ಅಬಕಾರಿ ತನಿಖಾ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಸಹಿ ಮಾಡಿರುತ್ತೇನೆ. ಆ ದಿನ ನಮ್ಮ ಇಲಾಖೆಯ ಅಧಿಕಾರಿಗಳು ವಾಹನ ತಪಾಸಣಾ ಮಾಡುತ್ತಿದ್ದಾಗ ಆರೋಪಿಯು ಅಕ್ರಮವಾಗಿ ಮದ್ಯದ ಬಾಟಲಿಗಳನ್ನು ಸಾಗಾಟ ಮಾಡುತ್ತಿದ್ದು ಸಾರ್ವಜನಿಕರು ಸಿಗದ ಕಾರಣ ನನ್ನನ್ನೇ ಪಂಚ ಸಾಕ್ಷಿದಾರರನ್ನಾಗಿ ಮಾಡಿಕೊಂಡು ಪಂಚನಾಮೆ ಮಾಡಿರುತ್ತಾರೆ. ಆ ದಿನ ನಮ್ಮ ಇಲಾಖಾ ಅಧಿಕಾರಿಗಳು ಗೋವಾದಿಂದ ಬರುತ್ತಿದ್ದ ಒಂದು ಬಿಳಿ ಬಣ್ಣದ ವಾಹನವನ್ನು ತಡೆದು ಪರಿಶೀಲಿಸಿದಾಗ ಸದರಿ ವಾಹನದ ಚಾಲಕ ನಮ್ಮನ್ನು ನೋಡಿ ಓಡಿ ಹೋಗಿದ್ದು ವಾಹನವನ್ನು ಪರಿಶೀಲಿಸಿದಾಗ 2 ಲೀಟರನ 20 ರಾಯಲ್ ಚಾಲೆಂಜ್ ವಿಸ್ಕಿ ಬಾಟಲಿಗಳು, 3 ಮತ್ತು 5 ಲೀಟರ್ ನ ವೈನ್ ಬಾಟಲಿಗಳು ಹಾಗೂ 20 ಲೀಟರ ಅಳತೆಯ ಎರಡು ಪ್ಲಾಸ್ಟಿಕ್ ಕ್ಯಾನ್ ಗಳಲ್ಲಿ 40 ಲೀಟರ್ ನಷ್ಟು ಮದ್ಯ ದೊರಕಿದ್ದು ಅವುಗಳನ್ನು ಅಮಾನತ್ ಪಡಿಸಿಕೊಂಡು ರಾಸಾಯನಿಕ ಪರೀಕ್ಷಾ ವರದಿಗಾಗಿ ಎಲ್ಲಾ ಮದ್ಯದ ಮಾದರಿಗಳಿಂದ ಒಂದೊಂದು ಬಾಟಲಿಗಳನ್ನು ರಾಸಾಯನಿಕ

ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದು ಅಮಾನತ್ ಪಡಿಸಿಕೊಂಡಿರುತ್ತಾರೆ. ತದನಂತರ ನಮ್ಮ ಸಮಕ್ಷಮ ಮಹಜರ್ ಬರೆದಿದ್ದು ಮಹಜರ್ ಗೆ ಸಹಿ ಮಾಡಿರುತ್ತೇನೆ. ಸಾಕ್ಷಿದಾರರು ಸ್ಯಾಂಪಲ್ ತೆಗೆದ ಬಾಟಲಿಗಳನ್ನು ನೋಡಿ ಗುರುತಿಸಿದ್ದು ಮು.ಮಾ.1 ರಿಂದ 4 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್.ಎಂ.ಹೆಚ್ ವಕೀಲರಿಂದ

ಆ ದಿನ ನಾನು 4-5 ಜನ ಸಿಬ್ಬಂದಿಗಳು ತನಿಖಾ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆವು. ವಾಹನವನ್ನು ತಪಾಸಣೆ ಮಾಡುತ್ತಿದ್ದ ಸ್ಥಳದಿಂದ ತನಿಖಾ ಠಾಣೆ ಸುಮಾರು 100 ರಿಂದ 200 ಮೀಟರ್ ದೂರವಿತ್ತು. ಸದರಿ ಸ್ಥಳದಲ್ಲಿ ಸಾಕಷ್ಟು ಮನೆಗಳಿದ್ದು ಅರಣ್ಯ ಇಲಾಖೆಯ ವಸತಿ ಗೃಹಗಳೂ ಸಹ ಇರುತ್ತವೆ ಎಂದರೆ ಸರಿ. ವಾಹನ ತಪಾಸಣಾ ಮಾಡುತ್ತಿದ್ದ ಸ್ಥಳದ ಚಕ್ಕಬಂದಿ ಹೇಳಲು ಆಗುವುದಿಲ್ಲ. ತನಿಖಾ ಠಾಣೆಯಲ್ಲಿ ಕುಳಿತು ಪಂಚನಾಮೆಯನ್ನು ಬರೆದಿದ್ದು ನಮ್ಮ ಸಹಿ ಪಡೆದಿರುತ್ತಾರೆಂದರೆ ಸರಿ. ಆ ದಿನ ಒಟ್ಟು ಎಷ್ಟು ಲೀಟರ್ ಮದ್ಯ ಅಮಾನತ್ ಪಡಿಸಿಕೊಂಡಿರುತ್ತಾರೆಂದು ಈಗ ನೆನಪಿಲ್ಲ. ಪಂಚನಾಮೆಯಿಂದ ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಕುಳಿತು ಬರೆದಿರುತ್ತಾರೆಂದು ಈಗ ನೆನಪಿಲ್ಲ. ತಪಾಸಣೆ ಮಾಡಿದ ವಾಹನವೂ ಪ್ಯಾಸೆಂಜರ್ ಗಾಡಿ ಆಗಿರುತ್ತದೆಯೆಂದರೆ ಸಾಕ್ಷಿದಾರರು ಮ್ಯಾಕ್ಸಿ ಕ್ಯಾಬ್ ಆಗಿರುತ್ತದೆಯೆಂದು ಉತ್ತರಿಸುತ್ತಾರೆ. ನಾನು ಪಂಚನಾಗಿ ಯಾವುದೇ ದಾಳಿಗೆ ಸಹಕರಿಸದಿದ್ದರೂ ನಮ್ಮ ಮೇಲಾಧಿಕಾರಿಗಳ ಮಾತು ಕೇಳಿಕೊಂಡು ಅವರು ತಯಾರಿಸಿದ ದಾಖಲೆಗೆ ಸಹಿ ಮಾಡಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮು.ಮಾ.1 ರಿಂದ 4 ನಮ್ಮ ಅಬಕಾರಿ ಇಲಾಖೆಯಲ್ಲಿ ಬಾಕಿಯಿದ್ದಂತಹ ಮುದ್ದೆ ಮಾಲನ್ನು ಬಳಸಿಕೊಂಡು ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಲಾಗಿರುತ್ತದೆಯೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.